ಗುಡಿಸಲ ಹಾಕಿ ಕೊಟ್ಟಿದ್ದರಂತೆ. ಇವರ ಮನೆಯ ಕಸಮುಸುರೆ ಮಾಡಿದಾಗ ದೂರಿನಿಂದ ಎರಡು ರೊಟ್ಟಿ ಒಗೀತಿದ್ದರಂತೆ. ಅವಳ ಮಗನನ್ನಂತೂ ಮನಿಯ ಒಳಗೂ ಸೇರಿಸತಿದ್ದಿಲ್ಲವಂತೆ. ಹುಡುಗಿಯವ್ವ ವಿಧವಾ ಹೆಂಗಸು ಪಾಪ ಏನು ಮಾಡಿಯಾಳು? ಆಕೆನೂ ಹೊಟ್ಟಿಬ್ಯಾನಿ ಹಚಕೊಂಡು ಸತ್ತಮ್ಯಾಲಂತೂ ಹುಡುಗಿಯ ಜನ್ಮ ನರಕವಾಗಿ ಹೋತು ನೋಡು. ಅಕಿಯ ಮಗ ಅಂಥಾ ನರಕದಾಗೇ ಚೂರುಪಾರು ಸಾಲಿ ಕಲಿತವ ಒಂದಿನ ಮನಿ ಬಿಟ್ಟು ಓಡಿಹೋದ. ಮುಂಬಯಿಯಲ್ಲಿ ಯಾವುದೋ ಕಂಪನಿಯಲ್ಲಿ ಸಣ್ಣಪುಟ್ಟ ಕೆಲಸ ಮಾಡಿ ಅಂತೂ ಇಂತೂ ಒಂದು ಬಾಳೇವು ಕಟ್ಟಿಕೊಂಡು ಆಮೇಲೆ ತನ್ನವ್ವನನ್ನು ಕರೆಸಿ ಕೊಂಡನಂತೆ. ಅಲ್ಲೇ ಮಕ್ಕಳು ಮರಿ ಆದವು; ನಸೀಮಾ ಅವನ ಕಿರಿಮಗಳು. ಅಕೀಯ ಕರ್ಮ ನೋಡು! ಈಗ ಇಷ್ಟು ವರ್ಷದ ಮ್ಯಾಲೆ ಇಸ್ಮಾಯಿಲ್ಲಗೆ ಆಕೆಯ ಹಿರೇರ ಕತಿ ಗೊತ್ತಾಗಬೇಕ? ಅದೇ ನೆವ ಮಾಡಿಕೊಂಡು ಅವನ ಮನೆಯ ಮಂದಿಯೆಲ್ಲ ಪಾಪದ ಹುಡುಗೀಗೆ ಚಿತ್ರಹಿಂಸಾ ಕೊಡಾಕತ್ತಿದ್ದರು. ಅದರೇ ಎಷ್ಟು ತಡಕೊಂಡೀತು ಹೇಳು? ಓಡಿ ಹೋಯಿತು' ಫಾತಿಮಾ ಒಂದೇ ಸಮನೆ ಹೇಳಿ ಕಣ್ಣೊರೆಸಿಕೊಂಡಳು.

ಪ್ರಾಜಕ್ತಾಗೆ ಎದೆಯಲ್ಲಿ ಹಾರೆ ಕುಟ್ಟಿದಂತಾಯಿತು. ಏನೋ ತಳಮಳ, ಹೇಳಲಾಗದ ಕಸಿವಿಸಿ! ಮರುದಿನ ಕೆಲಸದಲ್ಲೂ ಮನಸ್ಸೇ ಹತ್ತಲಿಲ್ಲ ಅವಳಿಗೆ. ಚಿತ್ರಾ ಮೇಡಂ ಮೊದಲ ಬಾರಿಗೆ ಬಣ್ಣದ ಹೂಕುಂಡಗಳ ಹೊಸ ಆರ್ಡರ್ ಬೇರೆ ತಗೊಂಡಿದ್ದಳು. ಭಟ್ಟಿಯಿಂದ ಕೆಳಗಿಳಿದ ಬಿಸಿಬಿಸಿ ಮೊದಲ ಒಬ್ಬೆ ತಣ್ಣಗಾಗಿತ್ತು. ಪ್ರೈಮರ್ ಹಚ್ಚಿಕೊಂಡ ಅವುಗಳ ಮೈಮೇಲೆ ಅರಳುವ ತಿಳಿ ಗುಲಾಬಿ ಮೊಗ್ಗುಗಳನ್ನು ಚಿತ್ರಾಳ ಖಾಸಾ ಚಿತ್ರ ಕಲಾವಿದ ಮಹೇಶ ಬಿಡಿಸಿಯೂ ಆಗಿತ್ತು. ಚಂದದ ಹೂಜಿಯಾಕಾರದ ಕುಂಡಗಳು ಸೈನಿಕರಂತೆ ಸಾಲಾಗಿ ನಿಂತಿದ್ದವು. ಪ್ರಾಜಕ್ತಾ ದೂಳು ಮೆತ್ತಿದ ಅವುಗಳ ಮೈಗೆ ಕೊಲಿನ್ ಹಾಕಿ ಮಿಂಚುವಂತೆ ಒರೆಸಿಡುತ್ತ ಅನ್ಯಮನಸ್ಕಳಾಗಿದ್ದಳು. ನೋಡನೋಡತ್ತಲೇ ಅವಳ ಕೈ ಜಾರಿ ಎರಡೂವರೆ ಸಾವಿರದ ಭಾರಿ ಗಾತ್ರದ ಹೂಕುಂಡ ಘಟೋತ್ಕಚನಂತೆ ನೆಲಕ್ಕೊರಗಿತ್ತು. ಅದರ ಎದೆಗುಂಟ ಸಣ್ಣನೆ ಬಿರುಕು! ಪ್ರಾಜಕ್ತಾಗೆ ಹೃದಯವೇ ನಿಂತಂತಾಯಿತು. ಗಾಬರಿಯಾಗಿ ಚಿತ್ರಾ ಮೇಡಂ ಬಳಿ



ಓಡಿ ಹೋದಳು. ಚಿತ್ರಾ ಮಾತ್ರ ತಟಸ್ಥೆ- 'ಹೋಗಲಿ ಬಿಡು ಪ್ರಾಜಕ್ತಾ ಹೂಕುಂಡ ಸರಿಯಾಗಿ ಸುಟ್ಟಿರಲಿಕ್ಕಿಲ್ಲ'

'ಈಗೇನು ಮಾಡೋದು ಮೇಡಂ? ಯಾಕಂದ್ರೆ ...... ಇವು ಮನೆಯೊಳಗಿಡುವ ಕುಂಡಗಳು'

'ಮಾಡೋದೇನು? ನೀರು ಹಾಕಿ ನೋಡು, ಸೋರಿದರೆ ಎಸೆದುಬಿಡು ಹಿಡಿದಿಟ್ಟುಕೊಂಡರೆ ಇಟ್ಟುಕೋ ಅಷ್ಟೇ'.

ಹೂಕುಂಡ ನೀರು ಹಿಡಿಯಲೇ ಇಲ್ಲ. ಯಾರೂ ಬಯ್ಯಲಿಲ್ಲ; ಪಗಾರವೂ ಕಟ್ಟಾಗೋದಿಲ್ಲ ಅಂತ ಗೊತ್ತಿದ್ದರೂ ಇಡೀ ದಿನ ಪ್ರಾಜಕ್ತಾ ತಪ್ಪಿತಸ್ಥ ಭಾವನೆಯಿಂದ ಹಿಡಿಯಾಗಿದ್ದಳು. ಆ ದಿನ ಮನೆಗೆ ಮರಳುವಾಗ ಅವಳಿಗೆ ಇಸ್ಮಾಯಿಲ್ ಚಾಚಾನ ದುಕಾನಿನತ್ತ ನೋಡಲೂ ಮನಸ್ಸಾಗಲಿಲ್ಲ. ಓಡುತ್ತಲೇ ಮನೆಗೆ ಬಂದಾಗ ಏದುಸಿರು ಬಿಡುತ್ತಿದ್ದಳು.

'ಗಿರಿಜಕ್ಕಾರೇ ಪ್ರಾಜಕ್ತಾ ಹ್ಯಾಂಗ ಹುಲಿ ಬೆನ್ನು ಹತ್ತಿದವರಂಗ ಓಡಿ ಬರ್ಲಿಕತ್ತಾಳ ನೋಡ್ರಿ' ಅನ್ನುತ್ತಾ ಕೆಳಗಿನ ಕಾಶಜ್ಜಿಯ ಮನೆಯ ಜೋಳ ಆರಿಸಿಕೊಡುತ್ತಾ ಕೂತಿದ್ದ ಫಾತಿಮಾ ನಕ್ಕಾಗ, ಜಮುನಾ ಎಂದಿನಂತೆ ಹರಟೆಗಿಳಿಯದೆ ಸರಕ್ಕನೆ ಪ್ರಾಜಕ್ತಾಳನ್ನು ಒಳಗೆಳೆದುಕೊಂಡು ಬಾಗಿಲಪ್ಪಳಿಸಿದಳು: 'ಯಾವಾಗ ನೋಡಿದರೂ ಕಿಸಿಕಿಸಿ ನಗಲಿಕ್ಕೇನಾಗೇದ ಈ ಫಾತಿಮಾನಿಗೆ? ಅಲ್ಲದೇ ನಮ್ಮ ಓಣ್ಯಾಗ ಇವರದೇನು ಕೆಲ್ಸಾ ಅಂತೇನಿ. ಸುಡ್ಲಿ ಡೇಂಜರ್ ಮಂದಿ' ಅಂತ ಗೊಣಗುಟ್ಟಿದವಳನ್ನು ನೋಡ್ತಾ ಪ್ರಾಜಕ್ತಾ ಕಲ್ಲಾದಳು.

●